(ಇಂದು ದಿನಾಂಕಃ **19-12-2023** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಶ್ರೀ ವಿ ಟಿ ಕೆ ವಕೀಲರಿಂದ:**

ದಾವಾ 1 ರಿಂದ 3 ನೇ ಜಮೀನುಗಳ ಸರ್ವೇ ನಂಃ 3/1 ಎಂದರೆ ಸರಿ. ಅವುಗಳ ಒಟ್ಟು ಕ್ಷೇತ್ರ 15 ಎಕರೆ 24 ಗುಂಟೆ ಎಂದರೆ ಸರಿ. ನನ್ನ ತಂದೆ ಕುಟುಂಬದ ಯಜಮಾನರು ಇದ್ದರು ಎಂದರೆ ಸರಿ. ಕುಟುಂಬದ ಎಲ್ಲಾ ಕೆಲಸಗಳನ್ನು ಅವರು ಮಾಡುತ್ತಿದ್ದರು ಎಂದರೆ ಸರಿ. ದಾವಾ 4 ಮತ್ತು 5 ರ ಜಮೀನುಗಳು ಮೂಲ ಸರ್ವೇ ನಂಃ 90/1 ಎಂದರೆ ಸರಿ. ಅದರ ಒಟ್ಟು ಕ್ಷೇತ್ರ 7 ಎಕರೆ 25 ಗುಂಟೆ ಎಂದರೆ ಸರಿ. ದಾವಾ ಸರ್ವೇ ನಂಃ 90/1 ನನ್ನ ತಾಯಿಯ ಹೆಸರಿನಲ್ಲಿತ್ತು ಎಂದರೆ ಸರಿ. ಅದು ನನ್ನ ತಾಯಿ ಖರೀದಿ ಹಿಡಿದ ಜಮೀನು ಎಂದರೆ ಸರಿ. ಸರ್ವೇ ನಂಃ 90/1 ನನ್ನ ತಾಯಿಯ ಸ್ವಯಾಜಿತ ಸ್ವತ್ತು ಎಂದರೆ ಸರಿ.

2. ನನ್ನ ತಾಯಿ ತೀರಿ ಹೋದ ಮೇಲೆ ಆಕೆಯ ಗಂಡು ಮತ್ತು ಹೆಣ್ಣು ಮಕ್ಕಳ ಹೆಸರಿನಲ್ಲಿ ರೆವಿನ್ಯೂ ದಾಖಲೆಗಳಲ್ಲಿ ದಾಖಲಾದವು ಎಂದರೆ ಸರಿ . ನನ್ನ ಸಹೋದರಿಯರು ನನ್ನ ಮತ್ತು ಪ್ರತಿವಾದಿ 1 ನೇಯವರ ಹೆಸರಿಗೆ ಸರ್ವೇ ನಂಃ 90/1 ರ ಸ್ವತ್ತಿನ ಮೇಲಿನ ತಮ್ಮ ಹಕ್ಕನ್ನು ಬಿಟ್ಟು ಕೊಟ್ಟರು ಎಂದರೆ ಸರಿಯಲ್ಲ . ನಂತರ ದಕ್ಷಿಣ ಭಾಗದ 3 ಎಕರೆ 33 ಗುಂಟೆಯನ್ನು ಪ್ರತಿವಾದಿ 1 ನೇಯವರು ಮತ್ತು 3 ಎಕರೆ 32 ಗುಂಟೆ ಯನ್ನು ನಾವು ಪಾಲು ವಿಭಾಗ ಮಾಡಿಕೊಂಡೇವು ಎಂದರೆ ಸರಿ ಮತ್ತು ಸರ್ವೇ ನಂಃ 90/1 ಸಬ್ ಡಿವಿಸನ್ ಆಗಿ ನನ್ನ ಭಾಗದ ಜಮೀನು ಸರ್ವೇ ನಂಃ 90/2 ಎಂದು ಮತ್ತು ನನ್ನ ಸಹೋದರನ ಭಾಗದ ಜಮೀನು 90/3 ಎಂದು ದಾಖಲಾಯಿತು ಎಂದರೆ ಸರಿ. ಆ ಬಗ್ಗೆ ಉತಾರುಗಳು ಆಗಿವೆ ಎಂದರೆ ಸರಿ. ನಿ ಪಿ 4 ಸದರಿ ಉತಾರು ಎಂದರೆ ಸರಿ. ನಂತರ ನನ್ನ ಸಹೋದರ ಸರ್ವೇ ನಂಃ 90/3 ಆತನ ಭಾಗದ ಜಮೀನನ್ನು ಪ್ರತಿವಾದಿ 2 ನೇವರಿಗೆ ಬಿಟ್ಟು ಕೊಂಡರು ಮತ್ತು ಆ ಬಗ್ಗೆ ದಾಖಲೆಗಳು ಆಗಿವೆ ಎಂದರೆ ಸರಿ. ನಿ ಪಿ 5 ಸದರಿ ಉತಾರು ಎಂದರೆ ಸರಿ.

3. ಸರ್ವ ನಂಃ 3/1 ರ ಮಧ್ಯ ಭಾಗದ 5 ಎಕರೆ 8 ಗುಂಟೆಯನ್ನು ನನ್ನ ತಂದೆಯವರು ಉತ್ತರ ಭಾಗದ 5 ಎಕರೆ 8 ಗುಂಟೆಯನ್ನು ನನ್ನ ಸಹೋದರ ಮತ್ತು ದಕ್ಷಿಣ ಭಾಗದ 5 ಎಕರೆ 8 ಗುಂಟೆಯನ್ನು ನಾವು ಪಾಲು ವಿಭಾಗ ಮಾಡಿಕೊಂಡೆವು ಎಂದರೆ ಸರಿಯಲ್ಲ. ಆ ಬಗ್ಗೆ ಉತಾರಿನಲ್ಲಿ ಸರ್ವೇ ನಂಃ 3/1/ಎ, 3/1/ಬಿ ಮತ್ತು 3/1/ಸಿ ಎಂದು ದಾಖಲಾಗಿದೆ ಎಂದರೆ ಸರಿ ಆದರೆ ಇದು ನನ್ನ ಗಮನಕ್ಕೆ ಬಂದಿಲ್ಲ ಎನ್ನುತ್ತಾರೆ. ನಿ ಪಿ 3 ಉತಾರು ನನ್ನ ಹೆಸರಿನಲ್ಲಿದೆ ಎಂದರೆ ಸರಿ. ನಿ ಪಿ 1 ಪ್ರತಿವಾದಿ 1 ನೇಯವರ ಹೆಸರಿನಲ್ಲಿದೆ ಎಂದರೆ ಸರಿ. ಅದೇ ರೀತಿ ಸರ್ವೇ ನಂಃ 3/1/ಬಿ 5 ಎಕರೆ 8 ಗುಂಟೆ ನನ್ನ ತಂದೆಯವರ ಹೆಸರಿನಲ್ಲಿದೆ ಎಂದರೆ ಸರಿ.

4. ನನ್ನ ತಂದೆಯವರು ತೀರಿ ಹೋಗಿದ್ದಾರೆ ಎಂದರೆ ಸರಿ. ಸರ್ವೇ ನಂಃ 3/1/ಬಿ ಕ್ಷೇತ್ರ 5 ಎಕರೆ 8 ಗುಂಟೆಯ ಜಮೀನಿನ ಉತಾರಿನಲ್ಲಿ ನನ್ನ ತಂದೆ ತೀರಿ ಹೋದ ಮೇಲೆ ಅವರ ಎಲ್ಲಾ ಮಕ್ಕಳ ಹೆಸರುಗಳು ದಾಖಲಾಗಿವೆ ಎಂದರೆ ಸರಿಯಲ್ಲ. ನನ್ನ ಸಹೋದರಿಯರು ಆತ್ಮ ಸಂತೋಷದಿಂದ ಸರ್ವೇ ನಂಃ 3/1/ಬಿ ಕ್ಷೇತ್ರ 5 ಎಕರೆ 8 ಗುಂಟೆಯ ಜಮೀನಿನ ಮೇಲಿನ ತಮ್ಮ ಹಕ್ಕನ್ನು ನನಗೆ ಮತ್ತು ನನ್ನ ಸಹೋದರನಿಗೆ ಬಿಟ್ಟು ಕೊಟ್ಟರು ಎಂದರೆ ಗೊತ್ತಿಲ್ಲ . ಆ ಬಗ್ಗೆ ಡ ಉತಾರು ಆಗಿದೆ ಎಂದರೆ ಗೊತ್ತಿಲ್ಲ. ಸರ್ವೇ ನಂಃ 3/1 ರ ಅಂತೂರ ಬೆಂತೂರು ರಸ್ತೆ ಇದೆ ಎಂದರೆ ಸರಿ. ಸರ್ವೇ ನಂಃ 3/1 ರ ಉತ್ತರ ಭಾಗದ ಜಮೀನು ಪ್ರತಿವಾದಿ 1 ರ ಹೆಸರಿನಲ್ಲಿ ಆಗಿದೆ ಎಂದರೆ ಸರಿಯಲ್ಲ. ಆ ಬಗ್ಗೆ ಉತಾರವಿದೆ ಎಂದರೆ ಸರಿ ಆದರೆ ಅವರು ನನ್ನ ಗಮನಕ್ಕೆ ತರದೇ ಮಾಡಿಕೊಂಡಿರುತ್ತಾರೆ. ಸರ್ವೇ ನಂಃ 3/1 ರ ಪೂರ್ವಕ್ಕೆ 6 ಅಡಿ ಅಗಲದ ಜಾಗ ಮುಂದಿನ ಜಮೀನುಗಳಿಗೆ ಅಂದರೆ ಸರ್ವೇ ನಂಃ 3/1/ಬಿ ಮತ್ತು 3/1/ಸಿ ಗಳಿಗೆ ಓಡಾಡಲು ಬಿಡಲಾಗಿದೆ ಎಂದರೆ ಸರಿ. ಸರ್ವೇ ನಂಃ 3/1/ಎ ಜಮೀನಿನ ಮೇಲೆ ನನ್ನ ಸಹೋದರ ಸಾಲ ಪಡೆದಿದ್ದಾರೆ ಎಂದರೆ ಇರಬಹುದು ಆದರೆ ನನಗೆ ಗೊತ್ತಿಲ್ಲ. ಆ ಬಗ್ಗೆ ವಿಜಯ ಬ್ಯಾಂಕಿನ ಭೋಜ ಉತಾರಿನಲ್ಲಿ ದಾಖಲಾಗಿದೆ ಎಂದರೆ ಗೊತ್ತಿಲ್ಲ. ಸರ್ವೇ ನಂಃ 3/1/ಸಿ ಜಮೀನಿನ ಮೇಲೆ ನಾನು ಸಹ ಬ್ಯಾಂಕಿನಿಂದ ಸಾಲ ಪಡೆದಿದ್ದೇನೆ ಮತ್ತು ಆ ಬಗ್ಗೆ ಬ್ಯಾಂಕಿನ ಭೋಜ ಉತಾರಿನಲ್ಲಿ ದಾಖಲಾಗಿದೆ ಎಂದರೆ ಸರಿ. ಸದರಿ ಮ್ಯುಟೇಶನ ದಾಖಲೆಯನ್ನು ಒಪ್ಪಿದ್ದು **ನಿ ಡಿ 1** ಎಂದು ಗುರುತಿಸಲಾಯಿತು ಸಾಕ್ಷಿದಾರ ಮುಂದುವರೆದು ಸಾಲ ಪಡೆದಿರುವ ಜಮೀನಿನ ಸರ್ವೇ ನಂಬರ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಾನು ಕೆವಿಜಿಬಿ ಬ್ಯಾಂಕ್ ಮ್ಯಾನೇಜರ ಆಗಿ ನಿವೃತ್ತಿಯಾಗಿರುತ್ತೇನೆ. ನನಗೆ ಸಾಲದ ದಾಖಲೆಗಳ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿ . ಸಾಕ್ಷಿದಾರ ವಿಭಾಗವಾದ ವಿಚಾರ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೇ ನಂಃ 3/1/ಬಿ ನಲ್ಲಿ ನಾನು ಉತ್ತರ ಭಾಗದ ಅರ್ಧ ಜಮೀನು ಮತ್ತು ಪ್ರತಿವಾದಿ 1 ದಕ್ಷಿಣ ಭಾಗದ ಅರ್ಧ ಜಮೀನು ಹಂಚಿಕೊಂಡೇವು ಎಂದರೆ ಸುಳ್ಳು. ಸರ್ವೇ ನಂಃ 3/1 ರಲ್ಲಿ ಒಟ್ಟಾರೆ ದಕ್ಷಿಣ ಭಾಗದ 7 ಎಕರೆ 32 ಗುಂಟೆಯನ್ನು ನಾನು ಮತ್ತು ಉತ್ತರ ಭಾಗದ 7 ಎಕರೆ 32 ಗುಂಟೆಯನ್ನು ನನ್ನ ಸಹೋದರ ಸಾಗುವಳಿ ಮಾಡುತ್ತಾ ಬಂದಿದ್ದೇವೆ ಎಂದರೆ ಸುಳ್ಳು. ಸಾಕ್ಷಿದಾರ ಮುಂದುವರೆದು ಪೂರ್ವ ಭಾಗದ ಜಮೀನನ್ನು ನಾನು ಮತ್ತು ಪಶ್ಚಿಮ ಭಾಗದ ಜಮೀನನ್ನು ನನ್ನ ಸಹೋದರ ಮಾಡುತ್ತೇವೆ ಎನ್ನುತ್ತಾರೆ. ನನ್ನ ವಾದಪತ್ರದಲ್ಲಿ ಆ ರೀತಿ ಬರೆದಿದ್ದಾರೆ ಎಂದರೆ ನಾನು ನೋಡಿಲ್ಲ ಎನ್ನುತ್ತಾರೆ. ನಾನೇನು ಸರ್ವೇ ನಂಃ 3/1 ಸಬ್ ಡಿವಿಸನ್ ಗಳಾದ ಬಗ್ಗೆ ಎಲ್ಲೂ ಪ್ರಶ್ನಿಸಿಲ್ಲ. ನನ್ನ ಜಮೀನಿನ

ಭೂ ಕಂದಾಯ ವನ್ನು ನಾನು ಮತ್ತು  ಆತನ ಜಾಗದ ಭೂ ಕಂದಾಯವನ್ನು ಆತ ಕಟ್ಟುತ್ತಿದ್ದಾನೆ ಎಂದರೆ ಸರಿ.

6. ನಾನು ಹುಬ್ಬಳ್ಳಿಯ ನಿವಾಸಿ ಎಂದರೆ ಹುಬ್ಬಳ್ಳಿ ಮತ್ತು ಅಣ್ಣಿಗೇರಿಯಲ್ಲಿರುತ್ತೇನೆ ಎನುತ್ತಾರೆ. ನನ್ನ ಆಧಾರ ಕಾರ್ಡ, ಚುನಾವಣಾ ಚೀಟಿ ಹುಬ್ಬಳ್ಳಿಯ ವಿಳಾಸದವುಗಳು ಇವೆ. ಸಿ ಟಿ ಎಸ್ 1306 ರ ಪೂರ್ವ ಭಾಗದ ಮನೆಯಲ್ಲಿ ನನ್ನ ಸಹೋದರಿ ಶಾಂತಾ ಬಂಗಾರಿಮಠ ಇದ್ದರು ಎಂದರೆ ಸರಿ ಸಾಕ್ಷಿದಾರ ಅವರು ತೀರಿ ಹೋಗಿದ್ದು ಈಗ ಅವರ ಮಗನಿರುತ್ತಾನೆ ಎನ್ನುತ್ತಾರೆ. ಪಶ್ಚಿಮ ಭಾಗದ ಮನೆಯಲ್ಲಿ 1 ನೇ ಪ್ರತಿವಾದಿಯ ಮಗ ವಾಸವಿದ್ದಾರೆ ಎಂದರೆ ಸರಿ. ಶಾಂತಾ ಬಂಗಾರಿಮಠ ರವರು ಅಲ್ಲಿ 35 ವರ್ಷಗಳಿಂದ ಇದ್ದಾರೆ ಎನ್ನುತ್ತಾರೆ ಸಾಕ್ಷಿದಾರ ಶಾಂತಾ ರವರಿಗೆ ನನ್ನ ತಂದೆಯವರು ಪೂರ್ವ ಭಾಗದ ಮನೆಯನ್ನು ಬಿಟ್ಟುಕೊಟ್ಟಿರುತ್ತಾರೆ ಎನ್ನುತ್ತಾರೆ. ನನ್ನ ತಂದೆಯ ಕಾಲದಲ್ಲಿ ಮೌಖಿಕವಾಗಿ ಮನೆ ವಿಭಾಗವಾಗಿ ಪೂರ್ವ ಭಾಗದಲ್ಲಿ ಶಾಂತಾ ಮತ್ತು ಪಶ್ಚಿಮ ಭಾಗದಲ್ಲಿ 1 ನೇ ಪ್ರತಿವಾದಿಯರು ವಾಸವಾಗಿರುತ್ತಾರೆ ಎಂದರೆ ಸಾಕ್ಷಿದಾರ 1 ನೇ ಪ್ರತಿವಾದಿ ಮತ್ತು ನನಗೆ ಜಂಟಿಯಾಗಿ ಪಶ್ಚಿಮ ಭಾಗದ ಮನೆಯಾಗಿರುತ್ತದೆ ಎನ್ನುತ್ತಾರೆ. ಆ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಮಾಡಿಲ್ಲ.

**ಮುಂದುವರಿದ ಪಾಟೀ ಸವಾಲುಃ ಸಮಯ ಕೋರಿದ್ದಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ .**

**Sd/-**
**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**